ಆಗಿದ್ದರು, ಅವರಿಗೆ ಅಪ್ಲಿಕೇಷನ್ಸ್ ಎಲ್ಲಾ ಕೊಟ್ಟಿದ್ದಕ್ಕೆ ಅವರು ಇದರ ಬಗ್ಗೆ ಸರ್ವೆ ಮಾಡಿ ನೋಡಿ ಮಾಡಿಕೊಡುತ್ತೇನೆ ಎಂದು ಹೇಳಿದ್ದರು. ಆದರೆ ಈಗ ಪ್ರಶ್ನೆ ಹಾಕಿದಾಗ ಯಾವುದೂ ಇಲ್ಲವೆಂದು ಹೇಳುತ್ತಾರೆ. ನಮ್ಮದು ಚಿತ್ರದುರ್ಗ ಬಾರ್ಡರ್ ಇದೆ. ಸಂಡೂರಿನಿಂದ ಬರಬೇಕಾದರೆ 60–70 ಕಿಲೋಮೀಟರ್ ಆಗುತ್ತದೆ. ಅಲ್ಲಿಂದ ಬರಬೇಕಾದರೆ ಬೆಂಗಳೂರಿನಿಂದ ಪರ್ಮಿಷನ್ ಬೇಕು ಎನ್ನುತ್ತಾರೆ. ಹೊಸಪೇಟೆಯಿಂದ ಬರಬೇಕಾದರೂ ಬೆಂಗಳೂರಿನಿಂದ ಪರ್ಮಿಷನ್ ಬೇಕು ಎಂದು ಹೇಳುತ್ತಾರೆ. ಚಿತ್ರದುರ್ಗದಿಂದ, ಬಳ್ಳಾರಿ ಕಡೆಯಿಂದ ಬರಬೇಕಾದರೂ ಬೆಂಗಳೂರಿನಿಂದ ಪರ್ಮಿಷನ್ ಬೇಕು ಎಂದರೆ ಹೇಗೆ ? ಅಲ್ಲಿ ನಮ್ಮ ಹಳ್ಳಿಗಳ ಗತಿ ಏನು ? ಮೊನ್ನೆ ಒಂದು ಹಳ್ಳಿ ನೆಲಬೊಮ್ಮನಹಳ್ಳಿ ಅಂತ, ಅಲ್ಲಿ 29 ಮನೆಗಳು ಸುಟ್ಟುಹೋಗಿವೆ. ಅವರು ಪರ್ಮಿಷನ್ ತೆಗೆದುಕೊಂಡು ಬರುವಷ್ಟರಲ್ಲಿ ಎಲ್ಲ ಸುಟ್ಟು ಬೂದಿಯಾಗಿವೆ. ಅದಕ್ಕಾಗಿ ನಾನು ಕೇಳುತ್ತಿದ್ದೇನೆ, ಈಗಾಗಲೇ ಎರಡು ಅಸೆಂಬ್ಲಿಗಳು ಆದವು. ಎರಡು ಅಸೆಂಬ್ಲಿಯಲ್ಲಿ ಕೇಳಿದಾಗಲೂ ಕೊಡುತ್ತೇವೆ ಎಂದು ಹೇಳಿದರು. ಆದರೆ ಅಗ್ನಿಶಾಮಕ ದಳವನ್ನು ನಮಗೆ ಕೊಡಲಿಲ್ಲ. ನಾವು ಕೇಳುವುದಕ್ಕೆ ಬೇರೆ ಏನಾದರೂ ಪ್ರೊಸೀಜರ್ ಇದೆಯೇನು ? ನಾನು ತಮ್ಮ ಮೂಲಕ ಮಾನ್ಯ ಮಂತ್ರಿಗಳನ್ನು ಕೇಳುತ್ತೇನೆ. ಈ ಸಲವಾದರೂ ಇದಕ್ಕೆ ಮಂಜೂರಾತಿಯನ್ನು ಅದಷ್ಟು ಬೇಗ ಕೊಡಬೇಕು.

ಶ್ರೀ ರಮಾನಾಥರೈ (ಒಳಾಡಳಿತ ರಾಜ್ಯಮಂತ್ರಿ) (ಮುಖ್ಯ ಮಂತ್ರಿಗಳ ಪರವಾಗಿ):– ಈಗಾಗಲೇ ಬಳ್ಳಾರಿ ಜಿಲ್ಲೆಯಲ್ಲಿ ಹರಪನಹಳ್ಳಿ, ಹೊಸಪೇಟೆ, ಸಂಡೂರು ಮತ್ತು ಬಳ್ಳಾರಿಯಲ್ಲಿ ನಾಲ್ಕು ಅಗ್ನಿಶಾಮಕದಳಗಳಿದ್ದು, ನಮ್ಮ ಒಂದು ನಿಯಮಾವಳಿ ಪ್ರಕಾರ ನಲವತ್ತು ಕಿಲೋಮೀಟರ್ ಸುತ್ತಳತೆಗೆ ಒಂದು ಅಗ್ನಿಶಾಮ ಠಾಣೆ ಎಂದು ಇರುತ್ತದೆ. ಪ್ರತಿಯೊಂದು ತಾಲ್ಲೂಕಿನಲ್ಲೂ ತಮಗೆ ಒಂದು ಅಗ್ನಿಶಾಮಕ ಠಾಣೆ ಬೇಕೆಂದು ಅವರ ಬೇಡಿಕೆ ಇದೆ. ಬಳ್ಳಾರಿಜಿಲ್ಲೆಯಲ್ಲಿ ನಾಲ್ಕು ಠಾಣೆಗಳಿದ್ದು ಹರಪನಹಳ್ಳಿಯಿಂದ 27 ಕಿಲೋಮೀಟರ್ ಒಳಗಡೆ ಮಾನ್ಯ ಸದಸ್ಯರು ಕೇಳಿರತಕ್ಕಂಥ ಕೊಟ್ಟೂರು ಪ್ರದೇಶ ಇದೆ. ಆದ್ದರಿಂದ ಈ ಪ್ರದೇಶದ ಏನಾದರೂ ಅನಾಹುತಗಳಿಗೆ ಹರಪನಹಳ್ಳಿ ಠಾಣೆಯಿಂದ ಕರೆಯಿಸುವ ಸಾಧ್ಯತೆ ಇದೆ. ಆದ್ದರಿಂದ ಈ ಒಂದು ಪ್ರಸ್ತಾವನೆ ಬಗ್ಗೆ ಹೆಚ್ಚಿನ ಗಮನ ಕೊಡಲಿಕ್ಕೆ ಕಷ್ಟಸಾಧ್ಯವೆಂದು ಹೇಳುವುದಕ್ಕೆ ಇಚ್ಛಿಪಡುತ್ತೇನೆ.

ಶ್ರೀ ಕೆ.ವಿ. ರವೀಂದ್ರನಾಥ ಬಾಬು:– ಹರಪನಹಳ್ಳಿಯಿಂದ ಕೊಟ್ಟೂರಿಗೆ 27 ಕಿಲೋಮೀಟರ್ ಇರಬಹುದು. ಆದರೆ ಬಾರ್ಡರ್ ವಿಲೇಜ್‌ಗಳು 50 ಕಿಲೋಮೀಟರ್‌ಗಿಂತ ಜಾಸ್ತಿ ಬರುತ್ತವೆ. ಅದಕ್ಕೆ ಬೆಂಗಳೂರಿನಿಂದ ಪರ್ಮಿಷನ್ ಬೇಕು ಎಂದು ಹೇಳಿದರೆ, ಅಲ್ಲಿಯವರೆಗೆ ನಾವೇನು ಮಾಡಬೇಕು ? ಹಳ್ಳಿಗಳು ಸುಟ್ಟುಹೋದರೆ ಏನು ಮಾಡಬೇಕು ? ಬೆಂಗಳೂರಿನಿಂದ ಪರ್ಮಿಷನ್ ಬರುವುದರೊಳಗೆ ಹೀಗೆ ಎಷ್ಟೋ ಸುಟ್ಟುಹೋಗಿವೆ. ಹರಪನಹಳ್ಳಿಯಲ್ಲಿ ಸ್ಟೇಷನ್ ಆದಮೇಲೂ ಕೂಡ ಇದು ಆಗಿರುವಂಥಾದ್ದು. ಹೋಗಲಿ, ಅಗ್ನಿಶಾಮಕ ಠಾಣೆಯನ್ನು ಚಿಕ್ಕಜೋಗನಹಳ್ಳಿಗೆ ಕೊಟ್ಟುಬಿಡಿ. ಅಲ್ಲಿಂದ 50 ಕಿಲೋಮೀಟರ್‌ಗಿಂತ ಜಾಸ್ತಿಯಾಗುತ್ತದೆ.

ಶ್ರೀ ರಮಾನಾಥರೈ:– ಮಾನ್ಯ ಸದಸ್ಯರು ಕೇಳಿದ ಪ್ರಶ್ನೆಗೆ ನನ್ನ ಅಪೇಕ್ಷೆ ಇಷ್ಟೆ:– ಮುಂದಿನ ದಿನಗಳಲ್ಲಿ ಆದ್ಯತೆ ಮತ್ತು ಅವಶ್ಯಕತೆ ಮನಗೊಂಡು ನಾವು ಅಲ್ಲಿ ಪ್ರಾರಂಭ ಮಾಡಲು ಪರಿಶೀಲಿಸುತ್ತೇವೆ.

ನೆಲಮಂಗಲ ಟೌನ್‌ನಲ್ಲಿ ಕ್ರೀಡಾಂಗಣ ನಿರ್ಮಾಣ

391 (527): ಶ್ರೀ ಅಂಜನಮೂರ್ತಿ (ನೆಲಮಂಗಲ):–

ಮಾನ್ಯ ಕನ್ನಡ ಸಂಸ್ಕೃತಿ ಹಾಗೂ ಯುವಜನಸೇವಾ ಮತ್ತು ಕ್ರೀಡಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ನೆಲಮಂಗಲ ಟೌನಿನಲ್ಲಿ ಕ್ರೀಡಾಂಗಣವಿಲ್ಲದೆ ಅಲ್ಲಿನ ಕ್ರೀಡಾಪಟುಗಳಿಗೆ ಅನಾನುಕೂಲವಾಗುತ್ತಿರುವುದು ನಿಜವಲ್ಲವೆ;

ಆ. ಈ ದಿಸೆಯಲ್ಲಿ ಸರ್ಕಾರಕ್ಕೆ ಮನವಿಗಳೇನಾದರೂ ಬಂದಿದೆಯೆ;

ಇ. ಹಾಗಿದ್ದಲ್ಲಿ, ಸದರಿ ಸ್ಥಳದಲ್ಲಿ ಕ್ರೀಡಾಂಗಣ ನಿರ್ಮಿಸಲು ಸರ್ಕಾರದವರು ಸೂಕ್ತ ಕ್ರಮ ಕೈಗೊಳ್ಳುವರೇ ?

ಶ್ರೀ ಎಚ್. ವಿಶ್ವನಾಥ್ (ಕನ್ನಡ ಮತ್ತು ಸಂಸ್ಕೃತಿ ಹಾಗೂ ಯುವಜನಸೇವಾ ಮತ್ತು ಕ್ರೀಡಾ ರಾಜ್ಯ ಸಚಿವರು):-

ಅ. ಹೌದು

ಆ. ಬಂದಿದೆ.

ಇ. ಹೌದು

ಶ್ರೀ ಆಂಜನಾಮೂರ್ತಿ:- ಮಾನ್ಯ ಅಧ್ಯಕ್ಷರೇ, ನನ್ನ ಪ್ರಶ್ನೆಗೆ ಉತ್ತರ ಯಾವ ರೀತಿ ಇದೆಯೆಂದರೆ, ಹಳ್ಳಿಕಡೆ ಒಂದು ಗಾದೆ ಇದೆ. ಮೂಕಿಯನ್ನು ಮಾತನಾಡಿಸಿದ ಹಾಗೆ. ಮೊದಲನೆಯ ಪ್ರಶ್ನೆಗೆ ಉತ್ತರ 'ಹೌದು' ಎರಡನೆಯ ಪ್ರಶ್ನೆಗೆ 'ಬಂದಿದೆ' ಮೂರನೆಯ ಪ್ರಶ್ನೆಗೆ 'ಹೌದು' ಎಂದಿದೆ. ನಮ್ಮ ನೆಲಮಂಗಲ ತಾಲ್ಲೂಕಿನಲ್ಲಿ ರಾಜ್ಯಮಟ್ಟದ, ರಾಷ್ಟ್ರಮಟ್ಟದ ಕ್ರೀಡಾಪಟುಗಳು ಇದ್ದಾರೆ. ಅದಕ್ಕೆ ತಕ್ಕಂತೆ ನೆಲಮಂಗಲದ ಪದವಿಪೂರ್ವ ಕಾಲೇಜು ಪಕ್ಕದಲ್ಲಿ ವಿಸ್ತಾರವಾದ ಖಾಲಿ ಜಾಗ ಇದೆ. ಇದು ಸರ್ಕಾರದ ಗಮನಕ್ಕೆ ಬಂದಿದೆ. ಕಳೆದ ಮೂರು ವರ್ಷಗಳಿಂದ ನಾನು ಒತ್ತಾಯ ಮಾಡುತ್ತಿದ್ದೇನೆ. ಕ್ರೀಡಾಪಟುಗಳ ಅಭಿವೃದ್ಧಿಗೆ, ಅವರಿಗೆ ಪ್ರೋತ್ಸಾಹ ಕೊಡುವ ರೀತಿಯಲ್ಲಿ ಒಂದು ಭವ್ಯ ಕ್ರೀಡಾಂಗಣ ಆಗಬೇಕು ಎಂದು. ಆದರೆ ಉತ್ತರವನ್ನು ಸರಿಯಾಗಿ ಕೊಡುತ್ತಿಲ್ಲ. ನಾನಾದರೂ ತಮ್ಮ ಮೂಲಕ ಒತ್ತಾಯ ಮಾಡುತ್ತಿದ್ದೇನೆ. ನೆಲಮಂಗಲ ಟೌನ್‌ನಲ್ಲಿ ಯಾವಾಗ ಕ್ರೀಡಾಂಗಣ ನಿರ್ಮಾಣ ಮಾಡುತ್ತೀರಿ ? ಇದರ ಬಗ್ಗೆ ಖಚಿತವಾದ ಉತ್ತರವನ್ನು ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಹೆಚ್. ವಿಶ್ವನಾಥ್:- ಸನ್ಮಾನ್ಯ ಅಧ್ಯಕ್ಷರೇ, ನೆಲಮಂಗಲದಲ್ಲಿ ಕ್ರೀಡಾಂಗಣ ತೆಗೆದುಕೊಳ್ಳುವುದಕ್ಕೆ, 1992-93ನೇ ಸಾಲಿನಲ್ಲಿ ಯೋಜನೆಯಲ್ಲಿ ಹಣ ಕೂಡ ಮಂಜೂರಾಗಿದೆ. ಆದರೆ, ನಿವೇಶನ ಇನ್ನೂ ಕೂಡ ನಮ್ಮ ಇಲಾಖೆಗೆ ಹಸ್ತಾಂತರ ಆಗದಿರುವ ಪ್ರಯುಕ್ತ, ಇದು ಇನ್ನೂ ಪ್ರಾರಂಭವಾಗಿಲ್ಲ. ದಯಮಾಡಿ, ಶಾಸಕರು ಮಧ್ಯಸ್ತಿಕೆ ವಹಿಸಿ, ನಿವೇಶನವನ್ನು ಬೇಗ ಕೊಡಿಸಿದರೆ, ನಾವು ಕಾರ್ಯ ಪ್ರಾರಂಭ ಮಾಡುತ್ತೇವೆ.

ಶ್ರೀ ಆಂಜನಾಮೂರ್ತಿ:- ಸಭಾಧ್ಯಕ್ಷರೇ, ಅವರ ಇಲಾಖೆ ವತಿಯಿಂದ ಅಧಿಕಾರಿಗಳು ಬಂದರೆ, ಇವತ್ತೇ ಜಮೀನು ಸ್ವಾಧೀನಕ್ಕೆ ಕೊಡಿಸುತ್ತೇನೆ. ಇದರ ಬಗ್ಗೆ ಈಗಾಗಲೇ ಅಲ್ಲಿನ ತಹಶೀಲ್ದಾರ್ ಅವರಿಗೂ ಹೇಳಿದ್ದೇನೆ. ಯಾವಾಗ ಬೇಕಾದರೂ ಜಾಗ ಕೊಡುವುದಕ್ಕೆ ರೆಡಿ ಇದ್ದೇವೆ. ಆದರೆ, ನಿಮ್ಮ ಇಲಾಖೆಯವರು ಯಾರೂ ಬರುತ್ತಿಲ್ಲವೆಂದು ಹೇಳುತ್ತಿದ್ದಾರೆ. 7 ಎಕರೆ ಜಮೀನು ಇದೆ.

ಶ್ರೀ ಹೆಚ್. ವಿಶ್ವನಾಥ್:- ರಾಜ್ಯದಲ್ಲಿ ಸುಮಾರು, 20 ತಾಲ್ಲೂಕು ಕೇಂದ್ರಗಳಲ್ಲಿ ಸರಿಯಾದ ನಿವೇಶನ ಸಿಗದೇ, ನಾವು ಕಾರ್ಯಾರಂಭ ಮಾಡಿಲ್ಲ. 150ಲಕ್ಷ ರೂಪಾಯಿಗಳು ನಮ್ಮ ಇಲಾಖೆಯಲ್ಲಿ

ಹಾಗೆಯೇ ಇದೆ. ಎಲ್ಲಾ ಶಾಸಕರೂ, ಅವರವರ ಕ್ಷೇತ್ರಗಳಲ್ಲಿ ನಿವೇಶನವನ್ನು ಕೊಡಿಸುವುದಕ್ಕೆ ಪ್ರಯತ್ನ ಮಾಡಿದರೆ, ನಾವು ಎಲ್ಲಾ ತಾಲ್ಲೂಕುಗಳಲ್ಲೂ, ಕೆಲಸ ಪ್ರಾರಂಭ ಮಾಡುತ್ತೇವೆ. ಮತ್ತೆ, ಕೇಂದ್ರ ಸರ್ಕಾರದಿಂದಲೂ ಕೂಡ, ಕ್ರೀಡೆಗೆ ಹೆಚ್ಚಿನ ಹಣ ಬರುತ್ತಿರುವುದರಿಂದ, ಯಾವುದೇ ತಾಲ್ಲೂಕಿನಲ್ಲಿ, ಯಾವುದೇ ಶಾಸಕರು ಇದರ ಬಗ್ಗೆ ಹೆಚ್ಚು ಪ್ರಯತ್ನ ಮತ್ತು ಒತ್ತು ಕೊಟ್ಟರೆ, ಎಲ್ಲಾ ಕಡೆಯೂ ಕೂಡ ಕ್ರೀಡಾಂಗಣ ನಿರ್ಮಾಣ ಮಾಡುವುದಕ್ಕೆ ಸರ್ಕಾರದವರು ತುರ್ತು ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಅಂಜನಾಮೂರ್ತಿ:– ಸಭಾಧ್ಯಕ್ಷರೇ, ನಾನು ಕೇಳುತ್ತಿರುವುದು ನೆಲಮಂಗಲ ತಾಲ್ಲೂಕಿನ ವಿಷಯ. ನಾನು ಇವತ್ತೇ ಜಮೀನು ಸ್ವಾಧೀನಕ್ಕೆ ಕೊಡಿಸುತ್ತೇನೆ. ಮಾನ್ಯ ಸಚಿವರು ಸರಿಯಾಗಿ ಉತ್ತರ ಕೊಡುತ್ತಾ ಇಲ್ಲ. ಇವತ್ತೇ ಜಮೀನು ಸ್ವಾಧೀನಕ್ಕೆ ಕೊಡಿಸುತ್ತೇನೆ. ಇದಕ್ಕೆ ಏನು ಉತ್ತರ ಕೊಡುತ್ತಾರೋ, ಕೊಡಲಿ.

ಶ್ರೀ ಹೆಚ್. ವಿಶ್ವನಾಥ್:– ಅವರು ಜಮೀನು ಕೊಡಿಸಿದರೆ, ತಕ್ಷಣವೇ ಕೆಲಸ ಪ್ರಾರಂಭ ಮಾಡುತ್ತೇವೆ.

ಶ್ರೀಮತಿ ಮಲ್ಲಾಜಮ್ಮ:– ಸನ್ಮಾನ್ಯ ಅಧ್ಯಕ್ಷರೇ, ಮಳವಳ್ಳಿಗೆ ಇಂತಹ ಕ್ರೀಡಾಂಗಣದ ಅವಶ್ಯಕತೆ ಇದೆ ಎಂದು ಮಾನ್ಯ ಸಚಿವರಿಗೆ ಮನವಿ ಕೊಟ್ಟಿದ್ದೇನೆ. ಈ ಬಗ್ಗೆ ಅವರು ಮಂಜೂರು ಮಾಡಿದ್ದಾರೆಯೇ ಎನ್ನುವುದನ್ನು ಈ ಸಭೆಗೆ ತಿಳಿಸಬೇಕು.

ಶ್ರೀ ಹೆಚ್. ವಿಶ್ವನಾಥ್:– ತಾಲ್ಲೂಕು ಕೇಂದ್ರಕ್ಕೆ ಕ್ರೀಡಾಂಗಣ ಯಾರು ಕೇಳಿದರೂ, ಮಂಜೂರು ಮಾಡಿಕೊಡತಕ್ಕ ಪ್ರಯತ್ನ ಆಗುತ್ತಿದೆ. ಬರೀ ಕಾಗದ ಕೊಡುವುದಷ್ಟೇ ಅಲ್ಲ, ಅವರು ತಮ್ಮ ಕ್ಷೇತ್ರಗಳಲ್ಲಿದ್ದು, ನಿವೇಶನ ಕೊಡಿಸುವಂಥ ಪ್ರಯತ್ನ ಕೂಡ ಆಗಬೇಕು. ಅವರು ಬರೀ ಕಾಗದ ಕೊಟ್ಟಿದ್ದಾರೆ, ಬರೀ ಕಾಗದದಲ್ಲಿ ಇದು ಆಗುವುದಿಲ್ಲ, ನಿವೇಶನವನ್ನೂ ಕೂಡ ಮಲ್ಲಾಜಮ್ಮನವರು ಕೊಡಿಸಬೇಕು.

ಹಿರೇಕೆರೂರು ತಾಲ್ಲೂಕಿನಲ್ಲಿ ಸ್ವಾತಂತ್ರ್ಯ ಯೋಧರ ಸ್ಮಾರಕ ಭವನ

392 (1509): ಶ್ರೀ ಬಿ.ಎಚ್. ಬನ್ನಿಕೋಡ್ (ಹಿರೇಕೆರೂರು):–

ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ಹಿರೇಕೆರೂರು ತಾಲ್ಲೂಕಿನಲ್ಲಿ 120 ಕ್ಕಿಂತ ಹೆಚ್ಚು ಸ್ವಾತಂತ್ರ್ಯ ಯೋಧರು ಇರುವುದನ್ನು ಸರ್ಕಾರವು ಗಮನಿಸಿದೆಯೇ;

ಆ. ಸ್ವಾತಂತ್ರ್ಯ ಯೋಧರ ಸ್ಮಾರಕ ಭವನ ನಿರ್ಮಿಸಲು ಹಿರೇಕೆರೂರು ತಾಲ್ಲೂಕು ಪಂಚಾಯತ್ ಸಮಿತಿಯ ಆವರಣದಲ್ಲಿ ನಿವೇಶನ ಒದಗಿಸಿರುವುದನ್ನು ಸರ್ಕಾರವು ಗಮನಿಸಿದಯೇ;

ಇ. ಹಿರೇಕೆರೂರು ತಾಲ್ಲೂಕಿನ ಸ್ವಾತಂತ್ರ್ಯ ಯೋಧರ ಸ್ಮಾರಕ ಭವನದ ನಿರ್ಮಾಣಕ್ಕಾಗಿ ಸತತವಾಗಿ ಮೂರು ವರ್ಷಗಳಿಂದ ಶಾಸಕರು ಸರ್ಕಾರದ ಗಮನ ಸೆಳೆದ ಬಗ್ಗೆ ಯೋಚನೆ ಹಾಗೂ ಯೋಜನೆಯನ್ನು ಸರ್ಕಾರವು ಮಾಡಿದೆಯೇ;

ಈ. ಹಾಗಿದ್ದಲ್ಲಿ, ಈ ಬಗ್ಗೆ ಅಂದಾಜು ಮೊತ್ತವೆಷ್ಟು ? ಮತ್ತು 1993–94ರ ಆಯವ್ಯಯದಲ್ಲಿ ಒದಗಿಸಿದ ಹಣವೆಷ್ಟು;

ಉ. ಈ ವಿಷಯದ ಬಗ್ಗೆ ಈ ಸರ್ಕಾರದ ನೀತಿ ಹಾಗೂ ಕಾರ್ಯಕ್ರಮವೇನು ?